ಶಾಲೆಗಳ ಸ್ಥಿತಿ–ಗತಿ

438 (356) ಶ್ರೀಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ):–ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಾಗಲಕೋಟೆ ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಪ್ರೌಢಶಾಲೆಗಳೆಷ್ಟು; ಅವುಗಳಲ್ಲಿ ಎಷ್ಟು ಶಾಲೆಗಳಲ್ಲಿ ಗುಮಾಸ್ತರು ಹಾಗೂ ಸಿಪಾಯಿಗಳು ಇರುವುದಿಲ್ಲ.

ಆ) ಸದರಿ ಶಾಲೆಗಳಲ್ಲಿ ಸಿಬ್ಬಂದಿಯನ್ನು ಎಂದಿನಿಂದ ಒದಗಿಸಲಾಗುವುದು;

ಇ) ಆಂಗ್ಲ ಭಾಷಾ ಕಲಿಸುವ ಪರಿಣಿತ ಶಿಕ್ಷಕರು ಇಲ್ಲದೇ ಇರುವ ಪ್ರೌಢಶಾಲೆಗಳೆಷ್ಟು;

ಈ) ಐಚ್ಚಿಕವಾಗಿ ಆಂಗ್ಲ ಭಾಷೆ ಕಲಿತ ಪದವೀಧರರು ಮಾತ್ರ ಆಂಗ್ಲ ಭಾಷೆ ಕಲಿಸಬಹುದಲ್ಲವೆ ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

ಅ) ಈ 137 ಪ್ರೌಢಶಾಲೆಗಳಲ್ಲಿ 98 ಗ್ರೂಪ್–ಡಿ ಹುದ್ದೆಗಳು ಭರ್ತಿಯಾಗಿರುತ್ತವೆ.

22 ಪ್ರೌಢಶಾಲೆಗಳಲ್ಲಿ ಗುಮಾಸ್ತರ ಹುದ್ದೆಗಳು ಮಂಜೂರಾಗಿರುವುದಿಲ್ಲ. 16 ಪ್ರೌಢಶಾಲೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳು ಖಾಲಿಯಿದ್ದು, ಅವುಗಳನ್ನು ನೇರ ನೇಮಕಾತಿಗಾಗಿ ಮೀಸಲಿರಿಸಿದೆ. ಉಳಿದ ಪ್ರೌಢಶಾಲೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳು ಭರ್ತಿಯಾಗಿರುತ್ತವೆ.

ಆ) ಹಂತಹಂತವಾಗಿ ಭರ್ತಿ ಮಾಡಲಾಗುವುದು.

ಇ) ಆಂಗ್ಲ ಭಾಷೆ ಹುದ್ದೆ ಮಂಜೂರಾಗದೇ ಇರುವ ಪ್ರೌಢಶಾಲೆಗಳು–64

ಆದರೆ ಈ ಶಾಲೆಗಳಲ್ಲಿ ಕಲಾ ವಿಷಯದ ಸಹ ಶಿಕ್ಷಕರು ಆಂಗ್ಲಭಾಷಾ ವಿಷಯವನ್ನು ಬೋಧನೆ ಮಾಡುತ್ತಿದ್ದಾರೆ.

ಈ) ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಆಸುಇ 59 ಎಸ್ಆರ್ಇ 2002, ದಿನಾಂಕ : 24–06–2003ರ ಆದೇಶದನ್ವಯ ಆಂಗ್ಲ ಭಾಷೆಯನ್ನು ಪದವಿಯಲ್ಲಿ ಐಚ್ಚಿಕ ವಿಷಯವಾಗಿ ಅಭ್ಯಾಸ ಮಾಡಿದ್ದಲ್ಲಿ ಮಾತ್ರ ಆಂಗ್ಲ ಶಿಕ್ಷಕರ ಹುದ್ದೆಗೆ ನೇಮಕಾತಿ ಮಾಡಲಾಗುವುದು.

ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ

439 (505) ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ):–ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–